ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ , ಉತ್ತರ ಕನ್ನಡ ಕಾರವಾರ-581 301

OFFICE OF THE DEPUTY COMMISSIONER, UTTARA KANNADA DISTRICT, KARWAR, -581 301

ದೂರವಾಣಿ : 08382 226406, 226471
Telephone: 08382 226603 (Fax)

Email: dckarwar@gmail.com
Website: http://uttara kannada.nic.in

ನಂ. ಕಂಶಾ/ಎಲ್.ಎನ್.ಡಿ-1/ಸಿಆರ್/48 /E-33249/2021-22 ದಿನಾಂಕ:-22-12-2021

ವಿಷಯ: **Kaiga Site** ಮತ್ತು Kaiga, **Town Ship** ಸಂಪರ್ಕಕ್ಕಾಗಿ **Nuclear Power Corporation India 1 & 2** Kaiga ಸಂಸ್ಥೆಗೆ ಸಂಪರ್ಕಕ್ಕಾಗಿ ಪರ್ಯಾಯ ರಸ್ತೆ ನಿರ್ಮಾಣ ಉದ್ದೇಶದ ಕುರಿತು ನೀಡಿದ 3.4744 ಹೆಕ್ಟೇರ್ ಪರಿಹಾರದ ಅರಣ್ಯ ಜಮೀನಿನ ಬದಲಾಗಿ ಕುಮಟಾ ತಾಲೂಕಿನ ಮಿರ್ಜಾನ ಹೋಬಳಿ ನಾಗೂರು ಗ್ರಾಮದ ಸ.ನಂ.**218** ರಲ್ಲಿ ಸರಕಾರಿ ಪಡ ಪೈಕಿ ಕ್ಷೇತ್ರ 8-23-0 ನೇದನ್ನು ಪರಿಹಾರಾತ್ಮಕವಾಗಿ ಅರಣ್ಯೀಕರಣಕ್ಕೆ ಅರಣ್ಯೇತರ ಜಮೀನನ್ನು ಮಂಜೂರಿಸುವ ಕುರಿತು.

Deputy Commissioner Uttara Kannada District ಜಿಲ್ಲಾಧಿಕಾರಿ, ಉ.ಕ.ಜಿಲ್ಲೆ

ಉಲ್ಲೇಖ:
1) ಅಧಿಕಾರಿಗಳು ಇನ್ ಫ್ರಾ ನ್ಯೂಕ್ಲಿಯರ್ ಪಾವರ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿಮಿಟೆಡ್ ಕೈಗಾರವರ ಪತ್ರ ಸಂಖ್ಯೆ:NPCIL/KGS1-6/JB/2021/S ದಿನಾಂಕ:-17-09-2021
2) ತಹಶೀಲ್ದಾರ ಕುಮಟಾರವರ ವರದಿ ಸಂ:ಎಲ್.ಎನ್,ಡಿ/ವಿವ/201/2021-22, ದಿನಾಂಕ:29-11-2021.
3) ಸಹಾಯಕ ಕಮೀಷನರ ಕುಮಟಾರವರ ವರದಿ ಸಂ:ಎಲ್.ಎನ್.ಡಿ/ಸಿಆರ್/26/ 2021-22. ದಿನಾಂಕ:30-11-2021.
4) ಸರ್ಕಾರದ ಆದೇಶ ನಂ/ಆರ್.ಡಿ 2/ಎಲ್.ಜಿ.ಡಬ್ಲ್ಯು/71/ದಿನಾಂಕ 20-5-1971
5) ಕರ್ನಾಟಕ ಭೂ ಮಂಜೂರಾತಿ ನಿಯಮಗಳು- 1969 ರ ನಿಯಮ 22-ಎ(3)(i)

***********

ಪ್ರಸ್ತಾವನೆ:

ಕಾರವಾರ ತಾಲೂಕ ಘಾಡಸಾಯಿ ಹೋಬಳಿ ವಿರ್ಜೆ ಗ್ರಾಮದ ಅರಣ್ಯ ಸ.ನಂ.91ಎ, 93 ಮತ್ತು 97 ರ ಒಟ್ಟು ಕ್ಷೇತ್ರ 3.4744 ಹೆಕ್ಟೇರ್ ಜಮೀನನ್ನು **Kaiga Site** ಮತ್ತು Kaiga, **Town Ship** ಸಂಪರ್ಕಕ್ಕಾಗಿ **Nuclear Power Corporation India 1 & 2** Kaiga ಸಂಸ್ಥೆಗೆ ಸಂಪರ್ಕಕ್ಕಾಗಿ ಪರ್ಯಾಯ ರಸ್ತೆ ನಿರ್ಮಾಣ ಉದ್ದೇಶದ ಕುರಿತು ಮಂಜೂರಿಸಿಕೊಳ್ಳಲು ಸದರಿ ಸ.ನಂ.ಜಮೀನಿಗೆ ಸಮಾನವಾದ ಅರಣ್ಯೇತರ ಕ್ಷೇತ್ರವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಸೂಕ್ತವಾದ ಸರಕಾರಿ ಜಮೀನನ್ನು ಮಂಜೂರಿಸಲು ಅಧಿಕಾರಿಗಳು ಇನ್ ಫ್ರಾ ನ್ಯೂಕ್ಲಿಯರ್ ಪಾವರ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿಮಿಟೆಡ್ ಕೈಗಾರವರು ಉಲ್ಲೇಖ (1) ರ ಪತ್ರದಲ್ಲಿ ಕೋರಿರುತ್ತಾರೆ.

ಅದರಂತೆ ತಹಶೀಲ್ದಾರ್ ಕುಮಟಾ ಹಾಗೂ ಸಹಾಯಕ ಆಯುಕ್ತರು ಕುಮಟಾರವರು ಉಲ್ಲೇಖ (2) ಹಾಗೂ (3) ರನ್ವಯ ಕುಮಟಾ ತಾಲೂಕಿನ ಮಿರ್ಜಾನ ಹೋಬಳಿ ನಾಗೂರು ಗ್ರಾಮದ ಸ.ನಂ.**218** ರಲ್ಲಿ ಸರಕಾರಿ ಪಡ ಪೈಕಿ ಕ್ಷೇತ್ರ 8-23-0 ಜಮೀನನ್ನು ಗುರುತಿಸಿ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕುಮಟಾ ತಾಲೂಕಿನ ಮಿರ್ಜಾನ ಹೋಬಳಿ ನಾಗೂರು ಗ್ರಾಮದ ಸ.ನಂ.218 ಕ್ಷೇತ್ರ 10-9-0 ಜಮೀನು ಪಹಣಿ ಪತ್ರಿಕೆ ಪ್ರಕಾರ ಕಂದಾಯ ಇಲಾಖೆಯಲ್ಲಿ ನಿಹಿತವಾಗಿದ್ದು ಈ ಜಮೀನು ಸರ್ಕಾರಿ ಪಡ ಎಂದು ವರ್ಗಾಯಿಸಲ್ಪಟ್ಟಿರುತ್ತದೆ. ಪ್ರಸ್ತಾಪಿತ ಜಮೀನು ಮೂಲತಃ ಸನ್ 1962 ರಲ್ಲಿ ಈರು ನಾಗಪ್ಪ ಮುಕ್ರಿ ಇವರಿಗೆ ತಾಲೂಕು ಹುಕುಂ ನಂ.LGL/SR/53 ದಿನಾಂಕ:-17-01-1962 ರಲ್ಲಿ ಮಂಜೂರಾಗಿರುವುದು ಮ್ಯುಟೇಶನ್ ಎಂಟ್ರಿ ನಂ.805 ನೇದರ ಪರಿಶೀಲನೆಯಿಂದ ಕಂಡು ಬರುತ್ತದೆ.ತದನಂತರದಲ್ಲಿ ಮಂಜೂರಿದಾರರು ಪ್ರಸ್ತಾಪಿತ ಜಮೀನನ್ನು ಸಂಯುಕ್ತ ಸಾಗುವಳಿಗಾಗಿ ನಾಗೂರು ಕೋ ಆಪರೇಟಿವ್ ಜೋಯಿಂಟ್ ಫಾರ್ಮಿಂಗ್ ಸೊಸೈಟಿ ಲಿಮಿಟೆಡ್ ಮಿರ್ಜಾನ ಇವರ ತಾಬಾ ಬಿಟ್ಟುಕೊಟ್ಟಿದ್ದು ಮ್ಯುಟೇಶನ್ ಎಂಟ್ರಿ ನಂ.917 ರ ಪರಿಶೀಲನೆಯಿಂದ ಕಂಡು ಬರುತ್ತದೆ. ಸನ್ 1975 ರಲ್ಲಿ ಮಂಜೂರಿ ಶರ್ತು ಉಲ್ಲಂಘಿಸಿದ ಕಾರಣ ಸದ್ರಿ ಜಮೀನನ್ನು ಸರಕಾರಿ ಪಡ ವಶಕ್ಕೆ ಪಡೆಯಲಾಗಿದ್ದು ಪ್ರಕರಣದಲ್ಲಿ ಅಳವಡಿಸಿದ ಮ್ಯುಟೇಶನ್ ಎಂಟ್ರಿ ನಂ.1104 ನೇದರ ಪರಿಶೀಲನೆಯಿಂದ ಕಂಡು ಬರುತ್ತದೆ.

ಪ್ರಸ್ತುತ ಸಾಲಿನ ಪಹಣಿಪತ್ರಿಕೆಯನ್ನು ಪರಿಶೀಲಿಸಲಾಗಿ 10-9-0 ಸರಕಾರ ಹಕ್ಕಿಗೆ ದಾಖಲಾಗಿದ್ದು ಪಹಣಿಪತ್ರಿಕೆಯ ಕಾಲಂ ನಂ 11 ರಲ್ಲಿ ನಾಗೂರು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬೇಸಾಯಗಾರ ಟಿಪ್ಪಣಿ ಇರುತ್ತದೆ. ಸದ್ರಿ ಜಮೀನು ಮಂಜೂರಿ ಕುರಿತು ನಮೂನೆ-57 ರಲ್ಲಿ ಯಾವುದೇ ಅರ್ಜಿ ಸಲ್ಲಿಕೆಯಾಗಿರುವುದಿಲ್ಲ. ಸದ್ರಿ ಜಮೀನನ್ನು ಮಂಜೂರಿ ಕೋರಿ ಮೂರು ಜನ ಮಾಜಿ ಸೈನಿಕರು ಅರ್ಜಿ ಸಲ್ಲಿಸಿದ್ದು ಬಾಕಿ ಇದ್ದು ಸದ್ರಿ ಜಮೀನು ಮಾಜಿ ಸೈನಿಕರಿಗೆ ಕಾಯ್ದಿರಿಸಿದ ಜಮೀನಾಗಿರುವುದಿಲ್ಲ. ಸದ್ರಿ ಜಮೀನಿನಲ್ಲಿ ಕಾಡು ಜಾತಿಯ ಜಂಗ್ಲಿ ಮರಗಳಿದ್ದು, ಅರಣ್ಯ ಜಮೀನಿನ ಮಧ್ಯದಲ್ಲಿದ್ದು, ದಟ್ಟ ಅರಣ್ಯ ಪ್ರದೇಶವಾಗಿರುವುದರಿಂದ ಸದ್ರಿ ಜಮೀನಿನ ಪೈಕಿ ಕ್ಷೇತ್ರ 8-23-0 ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವುದು ಸೂಕ್ತವಾಗಿರುತ್ತದೆಯಾಗಿ ತಹಶೀಲ್ದಾರ ಕುಮಟಾರವರು ಉಲ್ಲೇಖ (2) ರಂತೆ ತಮ್ಮ ಅಭಿಪ್ರಾಯ ಸಲ್ಲಿಸಿರುತ್ತಾರೆ.

ಸಹಾಯಕ ಆಯುಕ್ತರು ಕುಮಟಾರವರು ಉಲ್ಲೇಖ (3) ರಂತೆ ವರದಿ ಸಲ್ಲಿಸಿದ್ದು, ಸದ್ರಿ ಜಮೀನು ನಿರ್ಜನ ಪ್ರದೇಶವಾಗಿದ್ದು ಜನವಸತಿಯಿಂದ ದೂರವಿರುತ್ತದೆ. ಪಹಣಿಪತ್ರಿಕೆಯ ಕಾಲಂ ನಂ 11 ರಲ್ಲಿ ನಾಗೂರು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬೇಸಾಯಗಾರ ಟಿಪ್ಪಣಿ ಇರುತ್ತದೆ.ಆದರೆ ಸದ್ರಿ ಜಮೀನು ಹಲವಾರು ವರ್ಷಗಳಿಂದ ಸೊಸೈಟಿಯ ನಿರ್ವಹಣೆಯಲ್ಲಿರುವುದಿಲ್ಲ. ಜಮೀನು ಪಡ ಬಿಟ್ಟಿದ್ದು, ಅರಣ್ಯ ಮರಗಳಿಂದ ಕೂಡಿರುತ್ತಿದ್ದು, ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಉಲ್ಲೇಖ (4) ರ ಸರಕಾರದ ಆದೇಶದಂತೆ ಕ್ಷೇತ್ರ 4 ಹೇಕ್ಟರವರೆಗೆ ಸರಕಾರಿ ಜಮೀನನ್ನು ಸರಕಾರದ ಇತರೆ ಇಲಾಖೆಗಳಿಗೆ ವರ್ಗಾಯಿಸಲು ಜಿಲ್ಲಾಧಿಕಾರಿಗಳು ಅಧಿಕಾರ ಹೊಂದಿರುತ್ತಾರೆ, ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು- 1969 ರ ನಿಯಮ 22-ಎ(3)(i) ರಡಿಯಲ್ಲಿ ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಭೂಮಿಯನ್ನು ಉಚಿತವಾಗಿ ಮಂಜೂರಿಸಲು ಅವಕಾಶ ಇರುತ್ತದೆ. ಅದರಂತೆ ಈ ಕೆಳಗಿನಂತೆ ಆದೇಶ ಮಾಡಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಮತ್ತು ನನ್ನಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕ ಘಾಡಸಾಯಿ ಹೋಬಳಿ ವಿರ್ಜೆ ಗ್ರಾಮದ ಅರಣ್ಯ ಸ.ನಂ.91ಎ, 93 ಮತ್ತು 97 ರ ಒಟ್ಟು ಕ್ಷೇತ್ರ 3.4744 ಹೆಕ್ಟೇರ್ ಜಮೀನನ್ನು **Kaiga Site** ಮತ್ತು Kaiga, **Town Ship** ಸಂಪರ್ಕಕ್ಕಾಗಿ **Nuclear Power Corporation India 1 & 2** Kaiga ಸಂಸ್ಥೆಗೆ ಸಂಪರ್ಕಕ್ಕಾಗಿ ಪರ್ಯಾಯ ರಸ್ತೆ ನಿರ್ಮಾಣ ಉದ್ದೇಶದ ಕುರಿತು ಮಂಜೂರಿಸಿಕೊಳ್ಳಲು ಸದರಿ. ಜಮೀನಿಗೆ ಸಮಾನವಾದ ಅರಣ್ಯೇತರ ಜಮೀನಾದ ಕುಮಟಾ ತಾಲೂಕಿನ ಮಿರ್ಜಾನ ಹೋಬಳಿ ನಾಗೂರು ಗ್ರಾಮದ ಸ.ನಂ.**218** ರಲ್ಲಿ ಸರಕಾರಿ ಪಡ ಒಟ್ಟೂ ಕ್ಷೇತ್ರ 10-9-0 ನೇದರ ಪೈಕಿ ಕ್ಷೇತ್ರ 8-23-0 ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಆದೇಶಿಸಿದೆ,

ಪ್ರಸ್ತಾಪಿತ ಜಮೀನಿನ ಪಹಣಿಪತ್ರಿಕೆಯ ಕಾಲಂ ನಂ.11 ರಲ್ಲಿ ದಾಖಲಿರುವ "ನಾಗೂರು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬೇಸಾಯಗಾರ" ಟಿಪ್ಪಣಿಯನ್ನು ನಿಯಮನುಸಾರ ಕಡಿಮೆಗೊಳಿಸಲು ಸಹಾಯಕ ಕಮೀಷನರ್ ಕುಮಟಾರವರು ಕ್ರಮ ಜರುಗಿಸತಕ್ಕದ್ದು.

ಅರಣ್ಯ ಇಲಾಖೆಗೆ ಹಸ್ತಾಂತರಿಸಿದ ನಾಗೂರು ಗ್ರಾಮದ ಸ.ನಂ.218 ಜಮೀನಿನ ಚೆಕ್ ಬಂದಿ

| | |
|---|---|
| ಪೂರ್ವಕ್ಕೆ | ಲಾಗೂ ಫಾರೆಸ್ಟ್ |
| ಪಶ್ಚಿಮಕ್ಕೆ | ಲಾಗೂ ಸ.ನಂ.219. |
| ಉತ್ತರಕ್ಕೆ | ಲಾಗೂ ಫಾರೆಸ್ಟ್ |
| ದಕ್ಷಿಣಕ್ಕೆ | ಲಾಗೂ ಸ.ನಂ.220 |

Deputy Commissioner Uttara Kannada District
ಜಿಲ್ಲಾಧಿಕಾರಿ, ಉ.ಕ.ಜಿಲ್ಲೆ

ಜಿಲ್ಲಾಧಿಕಾರಿ,
ಉತ್ತರ ಕನ್ನಡ ಕಾರವಾರ

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೊನ್ನಾವರರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2) ಸಹಾಯಕ ಕಮೀಷನರ ಕುಮಟಾರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3) ತಹಶೀಲ್ದಾರ ಕುಮಟಾರವರಿಗೆ ಸೂಕ್ತ ಕ್ರಮದ ಬಗ್ಗೆ ಕಡತ ಪುಟ ಸಂಖ್ಯೆ:-01 ರಿಂದ ರ ವರೆಗೆ ಕಳುಹಿಸಿದೆ.
4) ಅಧಿಕಾರಿಗಳು ಇನ್ ಫ್ರಾ ನ್ಯೂಕ್ಲಿಯರ್ ಪಾವರ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿಮಿಟೆಡ್ ಕೈಗಾರವರಿಗೆ ಸೂಕ್ತ ಕ್ರಮದ ಕುರಿತು ಕಳುಹಿಸಿದೆ.

ಉಲ್ಲೇಖ ಸಂಖ್ಯೆ : IMR14304C77CFC655F

ಮುದ್ರಿತ ದಿನಾಂಕ : 29-12-2022

## ಮ್ಯುಟೇಶನ್ ರಿಜಿಸ್ಟರ್ ಪ್ರತಿ

| | | | | | |
|---|---|---|---|---|---|
| **ಜಿಲ್ಲೆ :** | ಉತ್ತರ ಕನ್ನಡ | **ವಹಿವಾಟು ವರ್ಷ** | 2021-2022 | **ಬದಲಾವಣೆ ರೀತಿ** | ಸರ್ಕಾರಿ ಆದೇಶ |
| **ತಾಲ್ಲೂಕು** | ಕುಮಟಾ | **ವಹಿವಾಟು ಸಂಖ್ಯೆ** | 56 | **ಸ್ವಾಧೀನತೆ ರೀತಿ** | ಮಂಜೂರು |
| **ಹೋಬಳಿ** | ಮಿರ್ಜಾನ | **ಮೂಲ** | ಸರಕಾರಿ ಆದೇಶ | **ಸಂಖ್ಯೆ** | LND1/CR/48/21/22 |
| **ಗ್ರಾಮ** | ನಾಗೂರ | **MR ಸಂಖ್ಯೆ** | H17 | **ದಿನಾಂಕ** | 22/12/2021 |
| | | | | | |

(ವಿಸ್ತೀರ್ಣ ಎಕರೆ ಮತ್ತು ಗುಂಟೆಗಳಲ್ಲಿ)

| ಬಾಧಿತವಾದ ಸರ್ವೆ ಮತ್ತು ಹಿಸ್ಸಾ ನಂ | ಹಕ್ಕು ಬದಲಾವಣೆ ಮಾಡಿದವರು | ವಿಸ್ತೀರ್ಣ | ಹಕ್ಕು ಬದಲಾವಣೆ ಪಡೆದವರು | ವಿಸ್ತೀರ್ಣ, | ತಪಾಸಣೆ ಅಧಿಕಾರಿ ರುಜು/ ಷರಾ |
|---|---|---|---|---|---|
| 218/*/* | ಸರಕಾರ -<br>ಹಕ್ಕುಗಳು : ಹಕ್ಕುಗಳು: [804, 879] | 4.21.00.00 | ಅರಣ್ಯ - | 4.21.00.00 | |
| | ಸರಕಾರ -<br>ಹಕ್ಕುಗಳು : ಹಕ್ಕುಗಳು: [ಸರಕಾರಿ ಪಡ 1104, 921, 797,]<br>ಋಣಗಳು : ಋಣಗಳು : [ನಾಗೂರು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬೇಸಾಯಗಾರ 921. ] | 4.02.00.00 | ಅರಣ್ಯ . - | 4.02.00.00 | |

| | | |
|---|---|---|
| ಮ್ಯುಟೇಶನ್ ಆದೇಶದ ವಿವರ : | | |
| ಮೊಕ್ಕಾಂ : ಕುಮಟಾ | | ಸಹಿ/- |
| ಮ್ಯುಟೇಶನ್ ಆದೇಶದ ದಿನಾಂಕ : 17-01-2022 | | ರಾಜಸ್ವ ನಿರೀಕ್ಷಕರು |
| ಮೊತ್ತ : Rs. ರೂ 25 (4 ಪುಟಗಳವರೆಗೆ ), ಪ್ರತಿ ಹೆಚ್ಚುವರಿ ಪುಟಕ್ಕೆ (5 ನೇ ಪುಟದಿಂದ) ರೂ 5 | | ಹೋಬಳಿ : ಮಿರ್ಜಾನ |

**Signed By : ANNAYYA LAMBANI**
**Signed on : 17-01-2022 11:33:56 AM**

ಗ್ರಾಮ ನಮೂನೆ 2
ತಾಲ್ಲೂಕು ಮೊಹರು

14304C77CF78F92

# ರೆಕಾರ್ಡ್ ಆಫ್ ರೈಟ್ಸ್ , ಗೇಣಿ ಮತ್ತು ಪಹಣಿ ಪತ್ರಿಕೆ (RTC) ಫಾರಂ ನಂ.೧೬

Print Page No: 1/1
Valid from 17/01/2022 To Till Date

ತಾಲ್ಲೂಕು : ಕುಮಟಾ ಹೋಬಳಿ : ಮಿರ್ಜಾನ ಗ್ರಾಮ : ನಾಗೂರ ಪುಟದ ಕ್ರಮ ಸಂಖ್ಯೆ :

| 1. ಸರ್ವೇ ನಂಬರ್ | 3. ಪೋತುವಾರು | ಎಕರೆ ಗುಂಟೆ ಆ | 4. ಕಂದಾಯ | ರೂ. ಪೈ. |
|---|---|---|---|---|
| 218 * | ಒಟ್ಟು ವಿಸ್ತೀರ್ಣ | 10.09.00.00 | (ಅ) ಭೂ ಕಂದಾಯ | 4.90 |
| | ಪೂಟ್ ಖರಾಬ್ (ಅ) | 0.00.00.00 | (ಬ) ಜೋಡಿ | 0.00 |
| | ಪೂಟ್ ಖರಾಬ್ (ಬ) | 0.00.00.00 | (ಕ) ಸೆಸ್ಸುಗಳು | 0.00 |
| | ಉಳಿದದ್ದು | 10.09.00.00 | (ಡ) ನೀರಿನ ದರ | 0.00 |
| 2. ಹಿಸ್ಸಾ * | | | ಒಟ್ಟು | 4.90 |

| 5. ಮಣ್ಣಿನ ನಮೂನೆ | 7. ಮರಗಳ ಸಂಖ್ಯೆ | | 8.ಪೋತುವಾರು ಪ್ರಕಾರ ನೀರಾವರಿಯ ವಿಸ್ತೀರ್ಣ | | | | | |
|---|---|---|---|---|---|---|---|---|
| | ಹೆಸರು | ಸಂಖ್ಯೆ | ಕ್ರ. ಸ. | ನೀರಾವರಿ ಮೂಲ | ಮುಂಗಾರು | ಹಿಂಗಾರು | ಬಾಗಾಯ್ತು | ಒಟ್ಟು |
| ಕೆಂಪು | | | | | | | | |
| 6. ಪಟ್ಟಾ: ಸರ್ಕಾರ | | | | | | | | |

| 9. ಕಬ್ಜೆ ಅಥವಾ ಸ್ವಾಧೀನದಾರನ ಹೆಸರು ತಂದೆಯ ಹೆಸರು ಮತ್ತು ವಿಳಾಸ | ವಿಸ್ತೀರ್ಣ ಎ ಗುಂ | ಖಾತೆ ನಂ. | 10. ಕಬ್ಜೆ ಅಥವಾ ಸ್ವಾಧೀನತೆಯ ರೀತಿ | 11. ಇತರೆ ಹಕ್ಕುಗಳು ಮತ್ತು ಋಣಗಳು: ಹಕ್ಕುಗಳು : | ಋಣಗಳು : |
|---|---|---|---|---|---|
| ಸರಕಾರ | 1.22.00.00 | 185 | MR T64/2015-2016 11/04/2016 ಒಟ್ಟುಗೂಡಿಸು | ಸರಕಾರಿ ಪಡ 1104, 917, 805,804, 879ಸರಕಾರಿ ಪಡ 1104, 921, 797, | ನಾಗೂರು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಬೇಸಾಯಗಾರ 917. |
| ಸರಕಾರ | 0.04.00.00 | 185 | MR T64/2015-2016 11/04/2016 ಒಟ್ಟುಗೂಡಿಸು | 804, 879 | |
| ಅರಣ್ಯ | 4.21.00.00 | 218 | MR H17/2021-2022 17/01/2022 ಮಂಜೂರು | | |
| ಅರಣ್ಯ . | 4.02.00.00 | 218 | MR H17/2021-2022 17/01/2022 ಮಂಜೂರು | | |

12. ಸಾಗುವಳಿ ಮತ್ತು ಗೇಣಿಯ ವಿವರಗಳು

49313433303443373743463738463932

| ವರ್ಷ ಮತ್ತು ಕಾಲ 1 | ವ್ಯವಸಾಯಗಾರನ ಹೆಸರು ಮತ್ತು ವಾಸಸ್ಥಳ 2 | ಸಾಗುವಳಿ ಪದ್ಧತಿ 3 | ಗೇಣಿಯ ವಿವರ: ವಿಸ್ತೀರ್ಣ ಎ ಗುಂ 4 | ಗುತ್ತಿಗೆ 5 | ವರ್ಗ 6 | ಭೂಮಿಯ ಉಪಯೋಗ: ವಿಸ್ತೀರ್ಣ ಎ ಗುಂ 7 | ಬಾಗಾಯ್ತು 8 | ಬೆಳೆಯ ಹೆಸರು 9 | ಬೆಳೆಯ ವಿಸ್ತೀರ್ಣ: ಅಮಿಶ್ರ 10 | ಮಿಶ್ರ 11 | ಒಟ್ಟು 12 | ನೀರಾವರಿ ಮೂಲ 13 | ಎಕರೆಗೆ ಉತ್ಪತ್ತಿ 14 | ಮಿಶ್ರ ಬೆಳೆಗಳ ಒಟ್ಟು: ಮಿಶ್ರಣದ ಹೆಸರು 15 | ವಿಸ್ತೀರ್ಣ ಎ. ಗುಂ 16 |
|---|---|---|---|---|---|---|---|---|---|---|---|---|---|---|---|
| 2022-2023 ಮುಂಗಾರು | ಸರಕಾರ | | | | | | -- | | 0.00.00.00 | 0.00.00.00 | 0.00.00.00 | | 0.00 | | |
| | ಸರಕಾರ | | | | | | -- | | 0.00.00.00 | 0.00.00.00 | 0.00.00.00 | | 0.00 | | |
| | ಸರಕಾರ | | | | | | -- | | 0.00.00.00 | 0.00.00.00 | 0.00.00.00 | | 0.00 | | |
| | ಅರಣ್ಯ | 1 | | | | | -- | | 0.00.00.00 | 0.00.00.00 | 0.00.00.00 | | 0.00 | | |
| | ಅರಣ್ಯ . | 1 | | | | | -- | | 0.00.00.00 | 0.00.00.00 | 0.00.00.00 | | 0.00 | | |

ದಿನಾಂಕ:29/12/2022 18:35 ಮೊತ್ತ: ರೂ. 25

RTC DIGITALLY SIGNED BY : ANNAYYA LAMBANI ON 1/17/2022
RTC UniqueNumber : I14304C77CF78F92
ಕರ್ನಾಟಕ ಭೂಕಂದಾಯ ನಿಯಮಾವಳಿ 1966 ರ ನಿಯಮ 40, 42, 58 ಮತ್ತು 70

ವಿಸ್ತೀರ್ಣ ಎಕರೆ ಮತ್ತು ಗುಂಟೆಗಳಲ್ಲಿ
ಪಹಣಿಯ ನೈಜತೆಯನ್ನು http://landrecords.karnataka.gov.in/rtcverification ವೆಬ್ ಸೈಟಿನಲ್ಲಿ ಅಥವಾ KA BHOOMI <RTC UniqueNumber> ಟೈಪ್ ಮಾಡಿ 161 ಗೆ ಸಂದೇಶ ಕಳುಹಿಸಿ ಪರಿಶೀಲಿಸಬಹುದು
Citizen may register their AADHAAR number and mobile number at www.landrecords.karnataka.gov.in to get SMS alerts about mutations on agricultural lands

* : ಬೆಳೆ ಸಮೀಕ್ಷೆ ಮಾಹಿತಿ ಸ್ವೀಕೃತವಾಗದ ಕಾರಣ, ಬೆಳೆ ಮಾಹಿತಿ ನಮೂದಿಸಿರುವುದಿಲ್ಲ